

ಕೇಸರಿ, ಕಪ್ಪು, ಬಿಳಿ ಬಣ್ಣಗಳ ಸಂಯೋಜನೆಯಿಂದ ಆಕರ್ಷಕವಾಗಿ ಕಾಣುವ ನೇಕಾರ ಜೇಡ, ತನ್ನ ಉಬ್ಬು ಬೆನ್ನಿನಿಂದ ಗುರುತಿಸಿಕೊಳ್ಳುವ ವಿಶೇಷ ಜೀವಿ.

# ಕಂಡಿರಾ ಕೇಸರಿ ಜೇಡವಾ...

■ ಶಶಿಧರಸ್ವಾಮಿ ಆರ್. ಹಿರೇಮಠ

ಮುಂಜಾನೆ ಆರರ ಮಬ್ಬುಗತ್ತಲಿನಲ್ಲಿ ನಡೆಯುತ್ತ, ಇನ್ನೇನು ಹೊಲದ ಬದುವನ್ನು ಹತ್ತಿ ಇಳಿಯಬೇಕೆನ್ನುವಷ್ಟರಲ್ಲಿ ಬೇಲಿ ಸಾಲಿನಲ್ಲಿ ಕೇಸರಿ ಬಣ್ಣದ ಜೀವಿಯೊಂದು ಅತ್ತಿತ್ತ ಅಡ್ಡಾಡಿದಂತೆ ಕಂಡಿತು.

ಅತ್ತ ನಡೆದು ಗಮನಿಸಿದೆ. ಮುಳ್ಳು ಕಳ್ಳಿಗಿಡದಿಂದ ಕೂಡಿದ ಪೊದೆಯ ಬೇಲಿಯಲ್ಲಿ ಜೇಡವೊಂದು ಬಲೆ ನೇಯುತ್ತಿತ್ತು. ಆ ಎಲೆಯಿಂದ ಈ ಎಲೆಗೆ, ಈ ಎಲೆಯಿಂದ ಆ ಎಲೆಗೆ ಎಳೆಯನ್ನು ಅಂಟಿಸಿ ಸುತ್ತುತ್ತ ವೃತ್ತಾಕಾರದಲ್ಲಿ ಬಲೆ ನೇಯುತ್ತಿತ್ತು.

ಈ ಜೇಡವನ್ನು ಇಂಗ್ಲಿಷಿನಲ್ಲಿ ಪಿಯರ್ ಶೇಪ್ಡ್ ಲ್ಯುಕೇಜ್ ಸ್ಪೈಡರ್ ಅಥವಾ ಪಿಯರ್ ಶೇಪ್ಡ್ ಒಪಾಡೋಮೆಟಾ ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ 'ಮರಸೇಬಿನ ಆಕಾರದ ಬಲೆ ನೇಕಾರ ಜೇಡ' ಎಂದು ಹೇಳಬಹುದು. ವೈಜ್ಞಾನಿಕವಾಗಿ ಲ್ಯುಕೇಜ್ ಫಾಸ್ಟಿಗಾಟಾ (**Leucauge fastigata**) ಎಂದು ಹೆಸರಿಸಲಾಗಿದೆ. ಉದ್ದ ದವಡೆಯ ಮಂಡಲ ನೇಕಾರ ಜೇಡಗಳ ಟೆಟ್ರಾಗ್ನತಿಡೇ (**Tetragnathidae**) ಕುಟುಂಬಕ್ಕೆ ಸೇರಿಸಲಾಗಿದೆ.

ಇದರ ಹೊಟ್ಟೆ ನೋಡಲು ಥೇಟ್ ಪಿಯರ್ ಹಣ್ಣಿನ ಆಕಾರದಲ್ಲಿ ಕಾಣುತ್ತದೆ. ಹೆಣ್ಣು ಜೇಡವು 8–10 ಮಿ.ಮೀ., ಗಂಡು ಜೇಡ 6–8 ಮಿ.ಮೀ. ವರೆಗೂ ಬೆಳೆಯುತ್ತದೆ. ಕೇಸರಿ, ಕಪ್ಪು ಹಾಗೂ ಬಿಳಿ ಬಣ್ಣಗಳಿಂದ ನೋಡಲು ಬಲು ಆಕರ್ಷಕವಾಗಿ ಕಾಣುತ್ತದೆ. ಎದೆಗೂಡಿನ ಭಾಗದಲ್ಲಿ ಆಳವಾದ ತೋಡು ಹೊಂದಿದ್ದು, ಶಿರೋವಕ್ಷ ಉದ್ದವಾಗಿದೆ. ಬಾಯಿಯ ಮುಂದೆ ಒಂದು



ಜೋಡಿ ಕೋರೆಯಂತಿರುವ, ಬಲವಾಗಿರುವ ಚೆಲಿಸೆರಾಗಳಿದ್ದು, ಅವುಗಳದ್ದೂ ಕೇಸರಿ ಬಣ್ಣ. ಕಾಲುಗಳು ಉದ್ದವಾಗಿ, ಬಲಿಷ್ಠವಾಗಿ ಕಪ್ಪಾದ ಕಿತ್ತಳೆ ಪಟ್ಟೆಗಳೊಂದಿಗೆ ಕೂದಲು ಮತ್ತು ಮುಳ್ಳುಗಳಿಂದ ಮುಚ್ಚಿರುತ್ತವೆ. ಮೊದಲ ಜೋಡಿ ಕಾಲುಗಳು ಎರಡನೇ ಜೋಡಿಗಿಂತ ಉದ್ದವಾಗಿರುತ್ತವೆ. ಆರು ಸಣ್ಣ, ಕಪ್ಪಾದ ಕಣ್ಣುಗಳಿವೆ.

ಈ ಜೇಡದ ವಿಶಿಷ್ಟ ಬಣ್ಣ ಮತ್ತು ಉಬ್ಬಿದ ಬೆನ್ನು ಇದನ್ನು ಸುಲಭವಾಗಿ ಗುರುತಿಸುವಂತೆ ಮಾಡಿದೆ. ಮಳೆಗಾಲದ ನಂತರದ ದಿನಗಳಲ್ಲಿ ಮಬ್ಬಾದ ಪ್ರದೇಶಗಳಲ್ಲಿನ ಸಸ್ಯಗಳ ಮೇಲೆ ಈ ಜೇಡ ಬಲೆ ನೇಯುತ್ತದೆ. ತಾನು ಹೆಣೆದ ಬಲೆಯ ಮಧ್ಯದಲ್ಲಿ ಕುಳಿತು ಬಲೆಗೆ ಬೀಳುವ ಕೀಟಗಳನ್ನು ಆಹಾರವಾಗಿ ಸೇವಿಸುತ್ತದೆ. ಬಲೆಯಲ್ಲಿ ತೊಂದರೆ ಕಂಡುಬಂದರೆ ತಕ್ಷಣವೇ ಬಲೆಯಿಂದ ದೂರ ಸಾಗಿ ರೆಂಬೆಕೊಂಬೆಗಳಲ್ಲಿ ಅಡಗಿ ಕುಳಿತುಕೊಳ್ಳುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**